# ಸಾಲಿ ವೆಂಕಣ್ಣಯ್ಯರ 'ಗಿರಿಜಾಕಲ್ಯಾಣ' ಯಕ್ಷಗಾನ ಕಾವ್ಯ ಒಂದು ಪಕ್ಷಿನೋಟ

**ಎಂ. ಮಹಾದೇವಪ್ರಭು**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಮಹದೇಶ್ವರ ಸ.ಪ್ರ.ದ.ಕಾಲೇಜು, ಕೊಳ್ಳೇಗಾಲ.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294285**

**ABSTRACT:**

ಗಿರಿಜಾ ಕಲ್ಯಾಣ ಕಥೆಯು ಪುರಾಣ ಪ್ರಸಿದ್ಧವಾಗಿದೆ. ಸುಮಾರು 15 ಪುರಾಣಗಳಲ್ಲಿ ಅಲ್ಪ ಸ್ವಲ್ಪ ಮರ್ಪಾಡುಗಳಲ್ಲಿ ಕಂಡುಬರುವ, ಶಿವ ಪಾರ್ವತಿಯರ ವಿವಾಹ ವಸ್ತುವಿರುವ ಈ ಕಥೆಯನ್ನು ಕುರಿತು ಕಾಳಿದಾಸನು ಸಂಸ್ಕೃತದಲ್ಲಿ ಕುಮಾರಸಂಭವನ್ನು, ಕನ್ನಡದಲ್ಲಿ ಹರಿಹರ ಕವಿಯು ಗಿರಿಜಾಕಲ್ಯಾಣವನ್ನು ಬರೆದು ಪ್ರಸಿದ್ಧಗೊಳಿಸಿದ್ದಾರೆ. ಹಾಗೆಯೇ ಕನ್ನಡ ಸಾಹಿತ್ಯದ ತ್ರಿಪದಿ, ಷಟ್ಪದಿ, ಸಾಂಗತ್ಯ ಮುಂತಾಗಿ ಹಲವು ಪ್ರಕಾರಗಳಲ್ಲಿಯಲ್ಲದೆ ಜನಪದರ ಹಾಡು ಕಥೆಗಳಲ್ಲಿಯೂ, ಯಕ್ಷಗಾನ ಬಯಲಾಟಗಳ ರೂಪದಲ್ಲಿಯೂ ರಚನೆಯಾಗಿವೆ. ಈ ನಿಟ್ಟಿನಲ್ಲಿ ಸಾಲಿವೆಂಕಣ್ಣಯ್ಯರೂ ಕೂಡ ಯಕ್ಷಗಾನ ಬಯಲಾಟ ಪ್ರಕಾರದಲ್ಲಿ ಈ ಕಥೆಯನ್ನು ಬರೆದಿದ್ದಾರೆ. ಅವರ ಕಿರು ಪರಿಚಯದೊಂದಿಗೆ ಅವರ ಗಿರಿಜಾಕಲ್ಯಾಣ ಯಕ್ಷಗಾನ ಕೃತಿಯನ್ನು ಪರಿಚಯಿಸುವುದು ಮತ್ತು ಹರಿಹರನ ಗಿರಿಜಾಕಲ್ಯಾಣದೊಂದಿಗೆ ಈ ಕೃತಿಗೆ ಇರುವ ಆಕರಗಳನ್ನು ಪರಿಶೀಲಿಸುವುದು ಈ ಲೇಖನದ ಆಶಯವಾಗಿದೆ.

**KEYWORDS:**

ಸಾಲಿವೆಂಕಣ್ಣಯ್ಯ, ಗಿರಿಜಾ ಕಲ್ಯಾಣ, ಬಯಲಾಟ, ಕಥೆಯ ನಿರೂಪಣೆ, ಹರಿಹರನ ಮೂಲ.

ಪುರಾಣ ಕಾಲದ ಶೀವಪಾರ್ವತಿಯರ ವಿವಾಹಕಥೆಯು ಗಿರಿಜಾ ಕಲ್ಯಾಣ ಎಂದೇ ಪ್ರಸಿದ್ಧವಾಗಿದೆ. ಕನ್ನಡದಲ್ಲಿ ಈ ಕಥೆಯು ಹರಿಹರ ಕವಿಯಿಂದ ಪ್ರಚಲಿತವಾಗಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಹರಿಹರ ಪೂರ್ವದಲ್ಲಿಯೂ ಆ ನಂತರದಲ್ಲಿಯೂ ಕೂಡ ಕಾವ್ಯ, ನಾಟಕ, ಯಕ್ಷಗಾನ, ಬಯಲಾಟಗಳಲ್ಲಿಯೂ ವಿಸ್ತಾರವಾಗಿ ರಚನೆಯಾಗಿದೆ. ಅವುಗಳಲ್ಲಿ ಸಾಲಿವೆಂಕಣ್ಣಯ್ಯನವರ ಗಿರಿಜಾಕಲ್ಯಾಣ ಯಕ್ಷಗಾನ-ಬಯಲಾಟ ಕಾವ್ಯವೂ ಒಂದಾಗಿದೆ.

### ವೆಂಕಣ್ಣಯ್ಯರ ಕಾಲ, ದೇಶ, ಕೃತಿಗಳು:

ವೆಂಕಣ್ಣಯ್ಯ ಅವರ ಕಾಲ ಕ್ರಿ.ಶ. 1850.[1] ಇವರು ಬಳ್ಳಾರಿ ಜಿಲ್ಲೆಯ ಎಮ್ಮಿಗನೂರಿಗೆ ಸೇರಿದವರು. ಆದರೆ ಜೀವಿತದ ಬಹುಕಾಲವನ್ನು ರಾಮಸಾಗರದಲ್ಲಿ ಕಳೆದರೆಂದು

ತಿಳಿಯುತ್ತದೆ. 'ರಾಮಾಸಾಗರದ ಬಂಡೆ ಭೀಮೇಶ ದೇವರು' ಇವರ ಆರಾಧ್ಯದೈವ.[2] ಇವರ ಬಯಲಾಟಗಳು ಬಳ್ಳಾರಿ ಜಿಲ್ಲೆಯಲ್ಲಿ ತುಂಬಾ ಪ್ರಸಿದ್ಧಿ ಪಡೆದಿವೆ. ತನ್ನ ಗಿರಿಜಾ ಕಲ್ಯಾಣ ಬಯಲಾಟದ ಗಣಸ್ತುತಿಯಲ್ಲಿ

**'ಸರಿ ಭೀಮೇಶನ ಕರುಣಾ ಭಕ್ತರೋದ್ಧರಣಾ**
**ಧರಿಯೊಳು ಮೆರೆವಾ | ರಾಮಾಬ್ಧಿಯಲ್ಲಿರುವಾ |**
**ಗುರು ಬಸವೇಶನ ಕರುಣದಿಂದಾಳಿಯನ್ನಾ |'**

ಎಂದು ಸ್ತುತಿಸಿದ್ದಾನೆ. ಇದರಿಂದಾಗಿ ರಾಮಾಬ್ಧಿ ಅಥವಾ ರಾಮಾಸಾಗರದಲ್ಲಿ ಕವಿಯು ಬಹಳ ದಿನಗಳನ್ನು ಕಳೆದಿರುವಂತೆ ತೋರುತ್ತದೆ.

ಸಾಳಿವೆಂಕಣ್ಣಯ್ಯನು 'ರಾಮಾಬ್ಧಿಪುರ ಬಂಡೆ ಭೀಮೇಶ' ಎಂಬ ಅಂಕಿತದಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗಿರಿಜಾಕಲ್ಯಾಣ, ಮಾರ್ಕಂಡೇಯನ ಕಥೆ, ತ್ರಿಪುರ ಸಂಹಾರ, ದಕ್ಷನ ಕಥೆ, ರಾವಣ ದಿಗ್ವಿಜಯ, ಪ್ರಹ್ಲಾದ ಚರಿತೆ ಮುಂತಾದ ಬಯಲಾಟಗಳು ಪ್ರಮುಖವಾಗಿವೆ.[3]

**ಗಿರಿಜಾ ಕಲ್ಯಾಣ ಬಯಲಾಟ-ಕೃತಿ ಸ್ವರೂಪ:**

ಗಿರಿಜಾ ಕಲ್ಯಾಣ ಕಾವ್ಯವಸ್ತು ತುಂಬಾ ಪ್ರಾಚೀನವಾದುದು. ಕನ್ನಡದಲ್ಲಿ ಹರಿಹರ ಕವಿಯಿಂದ ಚಂಪೂರೂಪದಲ್ಲಿ ರಚನೆಯಾದ ಈ ಕಥಾವಸ್ತುವು ಮುಂದೆ ತ್ರಿಪದಿ, ಸಾಂಗತ್ಯ, ಷಟ್ಪದಿ, ಯಕ್ಷಗಾನ ಮುಂತಾದ ಪ್ರಕಾರಗಳಲ್ಲಿ ರಚನೆಯಾಗಿದೆ. ಅಂತೆಯೇ ಸಾಳಿವೆಂಕಣ್ಣಯ್ಯನವರಿಂದ 'ಬಯಲಾಟ' ಪ್ರಕಾರದಲ್ಲಿಯೂ ರಚನೆಯಾಗಿದೆ. ಇದು ಕ್ರಿ.ಶ. 1850 ರ ಕಾಲಘಟ್ಟದಲ್ಲಿ ರಚನೆಯಾಗಿದ್ದು , 1995ರಲ್ಲಿ ಕೆ.ಆರ್. ದುರ್ಗಾದಾಸ್ ಮತ್ತು ಎಚ್. ಎಸ್. ನಾಗರಾಳ ಅವರಿಂದ ಸಂಪಾದಿತವಾಗಿದೆ. ಪ್ರಸ್ತುತ ಕೃತಿಯಲ್ಲಿ ಮಹೇಶ್ವರನ ಸಭೆ, ತಾರಕನ ಸಭೆ, ಶ್ರೀಕೃಷ್ಣನ ಸಭೆ, ಹಿಮಂತರಾಜನ ಸಭೆ ಮತ್ತು ಮನ್ಮಥಸಭೆ ಎಂದು 5 ಸಭೆಗಳಿವೆ. ಒಮ್ಮೆ ಪದ್ಯದಲ್ಲಿಯೂ, ಒಮ್ಮೆ ಗದ್ಯರೂಪದಲ್ಲಿಯೂ ಪ್ರಾಸ್ತಾಪಿತವಾದ ಭಾಷೆಯಿಂದ ಕೂಡಿ ಕಥೆಯು ಕಂಡುಬರುತ್ತದೆ.

ಮಹದೇಶ್ವರನ ಸಭೆಯಲ್ಲಿ ಶಿವ ಮತ್ತು ನಂದಿಯರ ಪಾತ್ರಗಳು ಕಾಣಿಸುತ್ತವೆ. ಇಲ್ಲಿ ಶಿವನು ದಕ್ಷಯಜ್ಞದಲ್ಲಿ ಸತಿಯನ್ನು ಕಳೆದುಕೊಂಡು ತನಗೆ ಉಂಟಾದ ದುಃಖವನ್ನು ನೀಗಿಸಿಕೊಳ್ಳಲು ಹೇಮಕೂಟದಲ್ಲಿ ತಪಸ್ಸಿಗೆ ಕೂಡುವನು. ಯಾರೂ ತನ್ನನ್ನು ಯೋಗ ತಪಸ್ಸಿನಿಂದ ಎಚ್ಚರ ಮಾಡದ ಹಾಗೆ ನೀನು ಕಾವಲು ಕಾಯಬೇಕೆಂದು ನಂದಿಗೆ ಅಪ್ಪಣೆ ಮಾಡಿ ಶಿವನು ತಪಸ್ಸಿಗೆ ಕೂರುವುದು ಮೊದಲ ಸಭೆಯಲ್ಲಿ ಕಾಣಬರುತ್ತದೆ.

ಎರಡನೆಯ ತಾರನ ಸಭೆಯಲ್ಲಿ ತಾರಕಾಸುರ, ವಜ್ರದಂಷ್ಟ್ರ ಮತ್ತು ಕಂಠೀರವ ಎಂಬ ಅಸುರರ ಪಾತ್ರಗಳು ಪರಸ್ಪರ ಸಂಭಾಷಣೆಯಲ್ಲಿ ತೊಡಗುತ್ತವೆ. ಇಲ್ಲಿ ತಾರಕಾಸುರನು ದೇವತೆಗಳ ಲೋಕಕ್ಕೆ ದಾಳಿಯಿಟ್ಟು ಎಲ್ಲರನ್ನು ಪೀಡಿಸುತ್ತಾನೆ. ದೇವೇಂದ್ರನನ್ನೂ ಸೋಲಿಸಿ, ಆತನ ಸತಿಯಾದ ಶಚೀದೇವಿಯನ್ನು ಬಂಧಿಸಿ ಸೆರೆಯಲ್ಲಿಡುತ್ತಾನೆ. ಇದರಿಂದ ತತ್ತರಿಸಿದ ದೇವತೆಗಳು ಬೃಹಸ್ಪತಿಯೊಂದಿಗೆ ಕೃಷ್ಣನಲ್ಲಿಗೆ ಹೋಗಿ ಮೊರೆಯಿಡುತ್ತಾರೆ.

ಮೂರನೆಯದು ಶ್ರೀಕೃಷ್ಣ ಕಥೆ. ಈ ಭಾಗದಲ್ಲಿ ಕೃಷ್ಣ , ಬೃಹಸ್ಪತಿ, ನಾರದರ ಪಾತ್ರಗಳು ಮುಖ್ಯವಾಗಿವೆ. ತಾರಕನ ಉಪಟಳಕ್ಕೆ ತತ್ತರಿಸಿದ ದೇವತೆಗಳು ಮಾರ್ಗೋಪಾಯಕ್ಕಾಗಿ ವಿಷ್ಣು (ಕೃಷ್ಣ ) ವಿನಲ್ಲಿಗೆ ಬೃಹಸ್ಪತಿಯನ್ನು ಕಳುಹಿಸುವರು. ದೇವತೆಗಳ ಸಂಕಟವನ್ನು ನಿವೇದಿಸಿದ ಬೃಹಸ್ಪತಿಗೆ ತನ್ನಿಂದ ಏನೂ ಆಗದೆಂದು, ಐದು ಮುಖದ ಶಿವನಲ್ಲಿ ಆರು ಮುಖದ ಷಣ್ಮುಖನು ಹುಟ್ಟುವಂತಾದರೆ ಅವನಿಂದ ತಾರಕನ ವಧೆಯಾಗುವುದೆಂದು ಕೃಷ್ಣನು ತಿಳಿಸುತ್ತಾನೆ. ಸ್ಪಷ್ಟದಾರಿ ಕಾಣದೆ ಹಿಂದಿರುಗುತ್ತಿದ್ದ ಬೃಹಸ್ಪತಿಗೆ ನಾರದ ಭೇಟಿಯಾಗಿ ಹೇಮಕೂಟದಲ್ಲಿ ಶಿವನ ತಪೋಭಂಗ ಮಾಡಲು ಮನ್ಮಥನನ್ನು ಕಳುಹಿಸಲು ಶ್ರೀಕೃಷ್ಣನಿಂದ ವಚನವನ್ನು ಪಡೆಯಿರಿ. ಮುಂದಿನದೆಲ್ಲ ನಮ್ಮ ಇಚ್ಛೆಯಂತೆ ನಡೆಯುತ್ತದೆ ಎಂದು ಹೇಳುತ್ತಾನೆ. ಶ್ರೀಕೃಷ್ಣನು ಇರುವ ಒಬ್ಬ ಮಗನನ್ನು ಶಿವನ ಹಣೆಗಣ್ಣುರಿಗೆ ಹೇಗೆ ದಬ್ಬುವುದು ಎಂಬ ಚಿಂತೆಯಲ್ಲಿ ಕೊರಗುತ್ತಾನೆ.

ನಾಲ್ಕನೆಯ ಹಿಮಂತರಾಜನ ಸಭೆಯಲ್ಲಿ ಹಿಮವಂತ, ಮೀನಕಿ, ಪಾರ್ವತಿ, ನಾರದ, ನಂದಿ ಇವರಲ್ಲದೆ ದೇವೇಂದ್ರ, ಬೃಹಸ್ಪತಿ, ಕೃಷ್ಣ ಪಾತ್ರಗಳು ಕಾಣಬರುತ್ತವೆ. ನಾರದರು ಹಿಮಂತರಾಜನ ಪಟ್ಟಣಕ್ಕೆ ಹೋಗಿ ಪಾರ್ವತಿಯು ಶಿವನಿಗೆ ಹೆಂಡತಿಯಾಗಲು ತಕ್ಕವಳು. ಆಕೆಯು ಜಗನ್ಮಾತೆಯೆಂದು, ಆಕೆಯ ಮಹಿಮೆಯನ್ನು ಕೊಂಡಾಡುತ್ತಾರೆ. ಪಾರ್ವತಿಗೆ ವರನ ನಿರೀಕ್ಷೆಯಲ್ಲಿದ್ದ ಹಿಮಂತ–ಮೀನಕಿಯರಿಗೆ ಆಶ್ಚರ್ಯವಾಗುತ್ತದೆ. ಅನಂತರ ಪಾರ್ವತಿಯು ಶಿವನಿರುವ ಹೇಮಕೂಟಕ್ಕೆ ತೆರಳಲು ಸಿದ್ಧಳಾಗುತ್ತಾಳೆ. ಮೀನಕಿಯು ಬೇಡವೆನ್ನುತ್ತಾಳೆ. ಪಾರ್ವತಿಯು ಮೀನಕಿಗೆ ಒಪ್ಪಿಸಿ ನಡೆಯುತ್ತಾಳೆ. ಹಿಮಂತನು ಜಯವಿಜಯರೊಂದಿಗೆ ಪಾರ್ವತಿಯನ್ನು ಹೇಮಕೂಟಕ್ಕೆ ಬಿಟ್ಟು ಬರುತ್ತಾನೆ.

ಐದನೆಯದು ಮನ್ಮಥ ಸಭೆ. ಇದು ದೀರ್ಘವಾದ ಭಾಗವಾಗಿದೆ. ಇಲ್ಲಿ ಕೃಷ್ಣ , ರುಕ್ಮಿಣಿ, ಮನ್ಮಥ, ರತಿಯರ ಪಾತ್ರಗಳು ಪ್ರಮುಖವಾಗಿವೆ. ಆಗ ತಾನೆ ವಿವಾಹವಾಗಿರುವ ಮನ್ಮಥನನ್ನು ಶಿವನ ತಪೋಭಂಗಕ್ಕೆ ಕಳುಹಿಸಲು ಬೇಡವೆಂದು ರುಕ್ಮಿಣಿ ಕೃಷ್ಣನಿಗೆ ಕೇಳುತ್ತಾಳೆ. ಆದರೆ ಭಕ್ತರಿಗೆ ಮಾತುಕೊಟ್ಟಿರುವುದರಿಂದ ಮನ್ಮಥನು ಹೋಗಲೇಬೇಕೆಂದು ಕೃಷ್ಣ ಹೇಳುತ್ತಾನೆ. ರತಿಯು ಮನ್ಮಥನನ್ನು ಹೋಗಬೇಡವೆಂದು ವಿಲಾಪಿಸಿ, ಕೊನೆಗೆ ತಾನೂ ಜೊತೆಯಾಗಿ ಹೋಗುತ್ತಾಳೆ.

ಶಿವನು ಪಾರ್ವತಿಯ ಕೈಹಿಡಿದು, ಅನಂತರ ಹಿಮವಂತನಲ್ಲಿಗೆ ಕನ್ಯಾರ್ಥಿಗಳಾಗಿ ಸಪ್ತರ್ಷಿಗಳು ಮತ್ತು ನಾರದರನ್ನು ಕಳುಹಿಸಿ, ಹಿಮವಂತ, ಮೀನಕಿಯರ ಒಪ್ಪಿಗೆ ಪಡೆದು, ನಾರದರೇ ಪುರೋಹಿತರಾಗಿ, ಪಾರ್ವತಿಯನ್ನು ವಿವಾಹವಾಗುತ್ತಾನೆ. ಷಣ್ಮುಖನು ಜನಿಸಿ, ಈಶ್ವರನಿಂದ ಅಪ್ಪಣೆ ಪಡೆದು ತಾರಕನೊಡನೆ ಯುದ್ಧಮಾಡಿ ಆತನನ್ನು ಕೊಲ್ಲುವುದರೊಂದಿಗೆ ಕಾವ್ಯ (ಬಯಲಾಟ)ಕ್ಕೆ ಮಂಗಳ ಹಾಡಲಾಗುತ್ತದೆ.

ಹೀಗೆ ಐದು ಸಭೆಗಳಿಂದ ಗಿರಿಜಾ ಕಲ್ಯಾಣ ಬಯಲಾಟವು ಶಿವ ಪಾರ್ವತಿಯರ ವಿವಾಹಕಥೆಯನ್ನು ವಸ್ತುವಾಗಿಟ್ಟುಕೊಂಡು ರಚನೆಯಾಗಿದೆ. ಆದರೂ ಹಲವಾರು ಮಾರ್ಪಾಡುಗಳನ್ನು ಈ ಬಯಲಾಟದಲ್ಲಿ ಕಾಣಬಹುದಾಗಿದೆ.

**ಕಥಾ ಸಂವಿಧಾನ:**

ವೆಂಕಣ್ಣಯ್ಯರ ಬಯಲಾಟ ಕಾವ್ಯವು ಸ್ಥೂಲವಾಗಿ ಶಿವ-ಪಾರ್ವತಿಯರ ವಿವಾಹ ಕಥೆಯಾಗಿದೆ. ಸೂಕ್ಷ್ಮವಾಗಿ ಶ್ರೀಕೃಷ್ಣ ಕುಟುಂಬ ಕಥೆಯಾಗಿದೆ. ದಕ್ಷಯಜ್ಞದಲ್ಲಿ ಸತಿಯನ್ನು ಕಳೆದುಕೊಂಡು ತಪಸ್ಸಿಗೆ ಕೂರುವುದರೊಂದಿಗೆ ಕಥೆಯು ಪ್ರಾರಂಭವಾಗಿದೆ. ಬಯಲಾಟದಲ್ಲಿ ಐದು ಸಭೆಗಳಿದ್ದು ಮೊದಲ ಸಭೆ ಮಹೇಶ್ವರ ಸಭೆಯಾಗಿದೆ. ಶಿವನು "ಸತಿಯು ಇಲ್ಲದ ಪತಿಯು ಎಲ್ಲಿರಬೇಕೆಂದು ತಿಳಿದು ಯೋಚನೆ ಮಾಡುತ್ತಿರುವೆನು" ಎಂದು ಸಾರಥಿಗೆ ಹೇಳುವ ಮೂಲಕ ಶಿವನ ದುಃಖವನ್ನು ಕವಿ ತಿಳಿಸುತ್ತಾನೆ. ಶಿವನು "ನಂದೀಶನೆ ಯಿಂದು ನಾನೀಜಗದೀ ಮಂದಾಭಾಗ್ಯನಾನಾದೆ ಜಗದೀ | ಸತಿಯಳುಯಿಲ್ಲದೇ ಯೀ ಕೈಲಾಸವು | ಸ್ಮಶಾನದಂತಿಹುದೊ ಸಹಿಸಲಾರೆನು ನಾ | ನಂದೀಶನೇ |" ಎಂದು "ಮುಂದೆ ದಾಕ್ಷಾಯಿಣಿಯು ಬರುತ್ತಾಳೆ. ಆಕೆಯ ಪಾದಕ್ಕೆ ನಮಸ್ಕಾರ ಮಾಡಿ ಸೇವಾವೃತ್ತಿಯಲ್ಲಿರು. ಕಂಡಿಯ ವೃಷಭೇಂದ್ರಾ," ಎಂದು ನಂದಿಗೆ ಹೇಳಿ ಶಿವನು ಹೇಮಕೂಟದಲ್ಲಿ ತಪಸ್ಸಿಗೆ ಕೂರುತ್ತಾನೆ. ಮುಂದೆ ಕವಿಯು ತಾರಕಾಸುರನ ವೃತ್ತಾಂತಕ್ಕೆ ಹೊರಳುತ್ತಾನೆ.

ತಾರಕಾಸುರನ ಸಭೆ ಎಂಬ ಎರಡನೆಯ ಸಭೆಯಲ್ಲಿ ತಾರಕನ ಪರಿಚಯವನ್ನು ಕವಿ ವರ್ಣನಾತ್ಮಕವಾಗಿ ಪರಿಚಯಿಸುತ್ತಾನೆ. ತಾರಕನ ಜೊತೆ ವಜ್ರದೌಂಷ್ಠ ಮತ್ತು ಕಂಠೀರವರ ಪಾತ್ರಗಳು ಕಾಣಿಸಿಕೊಂಡು ದೇವತೆಗಳ ಜೊತೆ ಯುದ್ಧಕ್ಕೆ ಸಿದ್ಧರಾಗಿರುವ ಸಂಗತಿಯನ್ನು ಕವಿ ಸಂಭಾಷಣೆಗಳ ಮೂಲಕ ನಿರೂಪಿಸುತ್ತಾನೆ. ತಾರಕನು ಶಿವನನ್ನೂ ಕಾಡುತ್ತೇನೆಂದು "ಯಲ್ಲೈ ಕೈಲಾಸ ಪರ್ವತದಲ್ಲಿರ್ಪ ಸಾಂಬನೆಂಬ ದೇವಾಧಿಪನ ಜಡೆಯಲ್ಲಿ ಅಡಗಿರ್ದ ಅಮರತರಂಗಿನಿಯಲ್ಲಿ ಯನ್ನ ಕರಪಾತ್ರದಿಂದ ಚಲ್ಲಿರ್ತಿಯಂ ಮಾಡಿ ಸರ್ತಿಗೊಮ್ಮೆ ಅವನ ಮುಡಿಯಂ ಹಿಡಿದೆಳೆಯುವೆ" ಎಂದು ತಾರಕನ ಶೌರ್ಯವನ್ನು ಕವಿ ಚಿತ್ರಿಸುತ್ತಾ ತಾರಕನೊಡನೆ ದೇವತೆಗಳೆಲ್ಲ ಹೋರಾಡಿ ಸೋತು ಹೋಗಿರುವ ವಿಚಾರವನ್ನು ಹೇಳಿದ್ದಾನೆ. ಮುಂದೆ ತಾರಕನು ವಜ್ರದಂಷ್ಟ್ರ, ಕಂಠೀರವರೊಂದಿಗೆ ಇಂದ್ರಲೋಕಕ್ಕೆ ದಾಳಿಯಿಡುತ್ತಾನೆ. ತಾರಕನಿಗೆ ಹೆದರಿ ಇಂದ್ರನು ಪಲಾಯನವಾಗುತ್ತಾನೆ. ತಾರಕನು ಇಂದ್ರನ ಪತ್ನಿ ಶಚಿಯನ್ನು ಸೆರೆಹಿಡಿಯುತ್ತಾನೆ. ತಾರಕನ ಮತ್ತು ಶಚಿಯರ ಸಂಭಾಷಣೆಗಳಲ್ಲಿ ಕಥೆ ಸಾಗುತ್ತದೆ. ತಾರಕನ ಉಪಟಳವನ್ನು ಸಹಿಸಲಾರದ ಶಚಿಯು ವಿಧವಿಧವಾಗಿ ಗೋಳಿಡುತ್ತಾಳೆ. ಶಿವನನ್ನು ಕುರಿತು ಬೇಡಿಕೊಳ್ಳುತ್ತಾಳೆ. "ಅಯ್ಯೋ ಹರಹರಾ ಯಿರಕ್ಕಸರು ಎಂದಿಗೆ ನಾಶವಾಗಿ ಹೋಗುತ್ತಾರೆ ನಾವು ಯಂದಿಗೆ ತನ್ಣಗಿದ್ದೇವಪ್ಪಾ ಸಾರಥಿ" ಎಂದು ಶಚಿಯು ಪ್ರಲಾಪಿಸುತ್ತಾಳೆ. ಈ ಹಿಂದೆ ರಕ್ಕಸನೊಬ್ಬನು ಎಳೆದೊಯ್ದು ದುಃಖಕ್ಕೆ ಈಡುಮಾಡಿದ ಸಂಗತಿಯನ್ನು ಶಚಿಯು ನೆನೆಯುತ್ತಾಳೆ. ಶಚಿಯು "ಪರವನಿತಾಮಣಿಯರ ಗೋಳಾಡಿಸಿ ದೋಷಾರೋಪಾ | ಅಯ್ಯೋ ಧರವೇ ನಿನ್ನಗೆ ಯಿದು ಸ್ಥಿರವೆ ಧನವು ದೈತ್ಯಯಾಧೀಶಾ | ತರುಳಿ ನಿನ್ನಗೆ ಕರಮುಗಿದು ಬೇಡುವೆನೋ ಶರೆಯನು ಬಿಡುಬಿಡು ಧರಣಿಪತಿಯೆ|" ಎಂದು ತಾರಕನನ್ನು ಪರಿಪರಿಯಾಗಿ ಬೇಡಿಕೊಂಡರೂ ತಾರಕನು ಆಕೆಯು ಈ ಹಿಂದೆ ರಾವಣ, ಅಂಧಕಾಸುರ, ಗಜಾಸುರ, ಜಲಂಧರ, ಹಿರಣ್ಯಕಶ್ಯಪ, ಮಹಿಷಾಸುರ, ಶಂಭರಾಸುರ, ಮುರಾಸುರ, ಬಾಣಾಸುರ ಮುಂತಾದ ರಾಕ್ಷಸರಲ್ಲಿ ಭೋಗಪಟ್ಟವಳೆಂದು ಶಚಿಯನ್ನು ಹೀಯಾಳಿಸಿ ತನ್ನ ಅರಮನೆಗೆ ನಡೆಯುವಂತೆ

ಆಕೆಯನ್ನು ಒತ್ತಾಯಿಸುತ್ತಾನೆ. ತಾರಕನು ಶಚಿಯ ಜೊತೆ ಇಂದ್ರನನ್ನು ಸೆರೆಹಿಡಿಯುತ್ತಾನೆ. ಹೀಗೆ ತಾರಕ - ಶಚಿಯರ ದೀರ್ಘ ಸಂವಾದದಲ್ಲಿ ಕಥೆ ಮುನ್ನಡೆದು ಕೃಷ್ಣನ ಸಭೆಗೆ ಹೊರಳುತ್ತದೆ. ತಾರಕಾಸುರನಿಂದಾದ ನೋವು, ಉಪಟಳವನ್ನು ಹೇಳಿಕೊಳ್ಳಲು ಬೃಹಸ್ಪತಿಯು ಕೃಷ್ಣನಲ್ಲಿಗೆ ಬರುತ್ತಾನೆ. ಬೃಹಸ್ಪತಿ-ಕೃಷ್ಣರ ಸಂವಾದದಲ್ಲಿ ಕಥೆ ಸಾಗುತ್ತದೆ. ಮುಂದೆ ಬೃಹಸ್ಪತಿ ನಾರದರ ಭೇಟಿಯಾಗುತ್ತದೆ. ದಕ್ಷಯಜ್ಞದಲ್ಲಿ ಸತೀದೇವಿಯ ದಹನ, ಪಾರ್ವತಿಯು ಹಿಮವಂತ-ಮೇನಕಿಯರಲ್ಲಿ ಜನಿಸಿದುದು, ಶಿವನು ತಪಸ್ಸು ಮಾಡುತ್ತಿರುವುದು, ಪರ್ವತಿಯು ಎಂಟು ವರುಷದವಳಾಗಿರುವುದು ಮುಂತಾದ ವಿವರಗಳನ್ನುನಾರದರು ಬೃಹಸ್ಪತಿಗೆ ತಿಳಿಸುವ ಮೂಲಕ ಶಿವ ಪಾರ್ವತಿಯರ ಹಿನ್ನೆಲೆಯನ್ನು ಕವಿ ತಿಳಿಸುತ್ತಾನೆ. ಹಾಗೆಯೇ, ಹಿಮವಂತ-ಮೇನಕೆಯರ ಪುತ್ರೀವಾತ್ಸಲ್ಯ ಕಾಣುತ್ತೇವೆ. ಪಾರ್ವತಿಯನ್ನು ಹೇಮಕೂಟಕ್ಕೆ ಕಳುಹಿಸಲು ಇಚ್ಚೆಯಿಲ್ಲದ ತಂದೆ ತಾಯಿಯರಿಗೆ ಪಾರ್ವತಿಯು "ಅಹೆ ತಾಯಿ ನೀನೇನು ಚಿಂತೆ ಮಾಡಬೇಡ| ಪರಮಾತ್ಮನನ್ನು ಕರೆತಂದು ನಿಮ್ಮೊಳ್ ದಯಾನ್ವಿತೆಯಾಗಿರುವಂತೆ ಮಾಡುವೆ|" ಎಂದು ಹೇಳಿ, "ವಿರೂಪಾಕ್ಷೇಶ್ವರನಂ ಕರತಂದು ದರುಶನ ಮಾಡಿಸುತ್ತೇನೆ ಮಾತೆ ಪ್ರಖ್ಯಾತೆ" ಎಂದು ಪಾರ್ವತಿಯು ತಂದೆ ತಾಯಿಗಳನ್ನು ಒಪ್ಪಿಸಿ ಶಿವನಿರುವಲ್ಲಿಗೆ ತೆರಳುತ್ತಾಳೆ. ನಂದಿಯು ಪಾರ್ವತಿಯನ್ನು ಕಂಡು ನಮಿಸುತ್ತಾನೆ. ಹಿಮವಂತನು ಪಾರ್ವತಿಯನ್ನು ಬೀಳ್ಕೊಟ್ಟು ಬರುತ್ತಾನೆ. ಮುಂದೆ ದೇವತೆಗಳಾದ ಇಂದ್ರ, ಬೃಹಸ್ಪತಿಯರು ಶಿವತಪೋಭಂಗಕ್ಕಾಗಿ ಮನ್ಮಥನನ್ನು ಕಳುಹಿಸುವಂತೆ ಕೃಷ್ಣನಲ್ಲಿಗೆ ಬಂದು ಪ್ರಾರ್ಥಿಸುತ್ತಾರೆ. ಕೃಷ್ಣನು ತನ್ನ ಮಗನಾದ ಮನ್ಮಥನನ್ನು ಶಿವತಪೋಭಂಗಕ್ಕೆ ಕಳುಹಿಸಲು ಇಚ್ಛೆ ಇಲ್ಲದಿದ್ದರೂ ಭಕ್ತರಾದ ದೇವತೆಗಳ ಮಾತಿಗೆ ಸಿಲುಕಿಕೊಂಡು ಮನ್ಮಥನನ್ನು ಕರೆಸುತ್ತಾನೆ. ಮುಂದೆ ಮನ್ಮಥನ ಸಭೆಯೊಂದಿಗೆ ಕಥೆಯು ಕೌಟುಂಬಿಕ ಕಥೆಯಂತೆ ಸಾಗುತ್ತದೆ. ಕೃಷ್ಣ-ಮನ್ಮಥ, ಕೃಷ್ಣ-ರುಕ್ಮಿಣಿ, ಮನ್ಮಥ-ರತಿ, ರತಿ-ಕೃಷ್ಣ ರುಕ್ಮಿಣಿಯರ ಸಂವಾದಗಳಲ್ಲಿ ಕಥೆ ಮುಂದುವರಿಯುತ್ತದೆ. ತಂದೆಯಾದ ಕೃಷ್ಣನ ಮಾತಿನಂತೆ ಮನ್ಮಥನು ಶಿವತಪೋಭಂಗಕ್ಕೆ ತೆರಳುತ್ತಾನೆ. ರುಕ್ಮಿಣಿಯು ಕೃಷ್ಣನೊಡನೆ ಪ್ರಲಾಪಿಸುತ್ತಾಳೆ. ತನ್ನ ಮಗನ ಬದಲಿಗೆ ಪತಿಯಾದ ಕೃಷ್ಣನನ್ನೇ ಶಿವತಪೋಭಂಗಕ್ಕೆ ತೆರಳುವಂತೆ ಹೇಳುತ್ತಾಳೆ. ಕೃಷ್ಣನು ಅದಕ್ಕೆ ಒಪ್ಪಿ ಹೋಗಲು ಮುಂದಾದಾಗ ಮನಸ್ಸು ಬದಲಾಯಿಸಿ, ತಡೆದು ಮದನನನ್ನೇ ಒಪ್ಪಿಸಿ ಕಳುಹಿಸುತ್ತಾಳೆ. ಈ ನಡುವೆ ನಾರದ-ರತಿಯರ ನಡುವಿನ ಸಂವಾದವಿದೆ. ನಾರದರು ಮನ್ಮಥನು ಶಿವತಪೋಭಂಗಕ್ಕೆ ತೆರಳದಂತೆ ತಡೆಯಲು ರತಿಗೆ ಹೇಳುತ್ತಾರೆ. ಮುಂದೆ ರತಿ-ಮನ್ಮಥರ ಸಂವಾದದಲ್ಲಿ ಕಥೆ ಸಾಗುತ್ತದೆ. ಮನ್ಮಥನು ಶಿವನಿಂದ ದಹನವಾಗುವ ಮೊದಲೇ ಪತಿಯನ್ನು ಕುರಿತು ರತಿಯು ಕೃಷ್ಣರುಕ್ಮಿಣಿಯಲ್ಲಿ ಗೋಳಿಡುತ್ತಾಳೆ. ಅಂತಿಮವಾಗಿ ರತಿಯು ಮನ್ಮಥನೊಡಗೂಡಿ ಹೇಮಕೂಟಕ್ಕೆ ತೆರಳುತ್ತಾಳೆ. ಮನ್ಮಥನು ಹೇಮಕೂಟ ಪರ್ವತವನ್ನು ಆಕಾಶಮಾರ್ಗದಲ್ಲಿ ರತಿಗೆ ಪರಿಚಯಿಸುತ್ತಾ ಸಾಗುತ್ತಾನೆ. ಕವಿಯು ಹಂಪೆಯ ಸುತ್ತಲಿನ ತಾಣಗಳನ್ನು ಮನ್ಮಥನ ಮೂಲಕ ಕಥೆಯೊಳಗೆ ಪರಿಚಯಿಸುತ್ತಾನೆ. ಹಂಪೆ, ಮಂತ್ರಾಲಯ, ತಿರುಪತಿ ಮುಂತಾದ ಸ್ಥಳಗಳ ಉಲ್ಲೇಖ ಮಾಡುತ್ತಾ ಕವಿಯು ಕಥೆ ನಿರೂಪಿಸುತ್ತಾನೆ. ಆದರೆ ಸಾವಿನ ಭಯದಲ್ಲಿರುವ ರತಿ ಮನ್ಮಥನಿಗೆ ಪಂಪಾಪುರದ ಸೌಂದರ್ಯಾಸ್ವಾದನೆ ಸಾಧ್ಯವೇ? ಎಂದು ಓದುಗರಿಗೆ

ಸಂದೇಹವಾಗುತ್ತದೆ. ಇಲ್ಲಿ ಕಥೆಯೊಳಗೆ ಕವಿಯ ಸಾಂದರ್ಭಿಕ ಪ್ರಜ್ಞೆ ಅನುಚಿತವೆನಿಸುತ್ತದೆ. ಮುಂದೆ ಶಿವತಪೋಭೂಮಿಯಲ್ಲಿ ಕಾವಲಾಗಿದ್ದ ನಂದೀಶ್ವರನನ್ನು ಮನ್ಮಥನು ಎದುರುಗೊಳ್ಳುತ್ತಾನೆ. ನಂದಿಯು ಮದನನನ್ನು ಯಾರೆಂದು ವಿಚಾರಿಸುತ್ತಾನೆ. ಮನ್ಮಥನು ತನ್ನನ್ನು ಪರಿಚಯಿಸಿಕೊಳ್ಳುತ್ತಾನೆ. ಶಿವ-ನಂದಿಯರು ಪರಸ್ಪರರು ಪರಾಕ್ರಮದಿಂದ ಮಾತುಗಳಾಡುತ್ತಿರುವಲ್ಲಿ ನಂದಿಯ ಕೋಪಕ್ಕೆ ಮನ್ಮಥನ ಸೈನ್ಯ ನಾಶವಾಗುತ್ತದೆ. ಅಷ್ಟರಲ್ಲಿ ಸಖಿಯರೊಡನೆ ಪಾರ್ವತಿಯು ಶಿವಪೂಜೆಗೆ ಬರುತ್ತಾಳೆ. ಮನ್ಮಥನು ಪಾರ್ವತಿಯಲ್ಲಿ ತನ್ನನ್ನು ಪರಿಚಯಿಸಿಕೊಂಡು ಬಂದ ಕಾರ್ಯವನ್ನು ವಿವರಿಸುತ್ತಾನೆ. ಪಾರ್ವತಿಯು ನಂದಿಗೆ ಮನ್ಮಥನನ್ನು ಒಳಗೆ ಬಿಡುವಂತೆ ಹೇಳುತ್ತಾಳೆ. ಪಾರ್ವತಿಯ ಸಹಾಯದಿಂದ ಶಿವನಿಗೆ ಪುಷ್ಪ ಬಾಣಗಳನ್ನು ಪ್ರಯೋಗಿಸಿದ ಮನ್ಮಥನು ಶಿವನ ಉರಿಗಣ್ಣಿಗೆ ಭಸ್ಮನಾಗುತ್ತಾನೆ. ಶಿವನು ಮನ್ಮಥನ ದೇಹದ ಭಸ್ಮವನ್ನು ತಿಲಕವಾಗಿ ಧರಿಸಿ ಹೋಗುತ್ತಾನೆ. ಪಾರ್ವತಿಯು ತಪಸ್ಸು ಮಾಡಿದಳೆಂದು ತಪಸ್ಸಿನ ವಿಚಾರಗಳನ್ನು ವರ್ಣಿಸದೆ ಕವಿ ಒಂದೇ ಸಾಲಿನಲ್ಲಿ ಹೇಳಿ ಮುಗಿಸುತ್ತಾನೆ. ಮುಂದೆ ನಾರದರು ಮತ್ತು ಸಪ್ತರ್ಷಿಗಳು ಹಿಂದಿರುಗಿದ ಪಾರ್ವತಿಯನ್ನು ಎದುರುಗೊಂಡು ಅರಮನೆಗೆ ಕರೆತರುತ್ತಾನೆ. ಮುಂದೆ ನಾರದರು ಮತ್ತು ಸಪ್ತರ್ಷಿಗಳು ಶಿವನಿಗೆ ಕನ್ಯಾರ್ಥಿಗಳಾಗಿ ಹಿಮವಂತನಲ್ಲಿಗೆ ಬರುತ್ತಾರೆ. ನಾರದ ಹಿಮವಂತರ ಸಂಭಾಷಣೆಯಲ್ಲಿ ವಿವಾಹ ನಿಶ್ಚಯವಾಗುತ್ತದೆ. ನಾರದರೇ ಪುರೋಹಿತರಾಗಿ ಶಿವಪಾರ್ವತಿಯರ ವಿವಾಹ ನಡೆದು, ಶಿವನು ಹಿಮವಂತನಿಗೆ ಉಡುಗೊರೆಯನ್ನು ನೀಡಿ ವಿವಾಹ ಸಂಭ್ರಮ ಮುಕ್ತಾಯವಾಗುತ್ತದೆ. ಮನ್ಮಥನು ಹೇಮಕೂಟಕ್ಕೆ ಬಂದ ಮೇಲೆ ಕಥೆ ಶಿವಪಾರ್ವತಿಯರ ವಿವಾಹದವರೆಗೂ ವೇಗವಾಗಿ ನಡೆಯುತ್ತದೆ. ಇಲ್ಲಿಗೆ ಗಿರಿಜಾ ಕಲ್ಯಾಣ ಕಥಾಭಾಗ ಮುಗಿಯುತ್ತದೆ.

ಮುಂದೆ ಷಣ್ಮುಖ ಜನನ ವೃತ್ತಾಂತಕ್ಕೆ ಕಥೆ ಸಾಗುತ್ತದೆ. ಷಣ್ಮುಖನು ಜನಿಸಿ, ಶಿವನೊಂದಿಗೆ ಸಂಭಾಷಣೆಯಾಗುತ್ತದೆ. ಶಿವನು ತಾರಕಾದಿ ದೈತ್ಯರನ್ನು ಸಂಹರಿಸಿ ಬರುವಂತೆ ಷಣ್ಮುಖನಿಗೆ ಹೇಳುತ್ತಾನೆ. ಅದರಂತೆ ಷಣ್ಮುಖನು ವಜ್ರದೌಷ್ಠ, ಕಂಠೀರವ, ತಾರಕಾಸುರಗಳನ್ನು ಕೊಲ್ಲುವ ಮೂಲಕ ಗಿರಿಜಾಕಲ್ಯಾಣ ಬಯಲಾಟದ ಕಥೆಯು ಮುಕ್ತಾಯವಾಗುತ್ತದೆ. ಕಥೆಯಲ್ಲಿ ಪಾರ್ವತಿಯ ತಪಸ್ಸಿನ ವಿವರಗಳಾಗಲೀ, ಶಿವನ ವಟುವೇಷದ ಪರೀಕ್ಷೆಯಾಗಲೀ, ರತಿಯ ವಿಲಾಪವಾಗಲೀ, ಮದನನಿಗೆ ಅನಂಗನಾಗುವ ವರವಾಗಲೀ ಈ ಕಥೆಯಲ್ಲಿ ಕಂಡುಬರುವುದಿಲ್ಲ.

**ಆಕರ ಪರಿಶೀಲನೆ:**

'ಗಿರಿಜಾ ಕಲ್ಯಾಣ' ಬಯಲಾಟ ಕೃತಿಯು ಬಹುಪಾಲು ಹರಿಹರನ `ಗಿರಿಜಾ ಕಲ್ಯಾಣ' ಕಾವ್ಯದ ಕಥೆಯನ್ನು ಆಧರಿಸಿ ಬರೆಯಲ್ಪಟ್ಟಿದೆ. ಹರಿಹರನು ಹೇಳಿಕೇಳಿ ಭಕ್ತಕವಿ ಚಂಪೂವಿನಲ್ಲಿ ಕಾವ್ಯರಚನೆ ಮಾಡಿ ನಿರೂಪಣೆ ಮತ್ತು ವರ್ಣನೆಗೆ ಆದ್ಯತೆ ನೀಡಿದ್ದಾನೆ. ಹಾಗಾಗಿ ಹರಿಹರ ಪುರದ ವರ್ಣನೆ, ನಿಸರ್ಗ, ಮೃಗಸಂತತಿ, ಪಾರ್ವತಿಯ ತಪಸ್ಸು, ಶಿವನ ಪಾರಮ್ಯತೆಗಳನ್ನು ವರ್ಣನಾಪ್ರಧಾನವಾಗಿ ಚಿತ್ರಿಸುವಲ್ಲಿ ಹೆಚ್ಚಿನ ಆಸಕ್ತಿ ತೋರಿದ್ದಾನೆ. ಸಾಲಿವೆಂಕಣ್ಣಯ್ಯನವರು ಕಥೆಗೆ ಹರಿಹರನನ್ನು ಹಿನ್ನೆಲೆಯಾಗಿರಿಸಿಕೊಂಡರೂ ಅನೇಕ

ಮಾರ್ಪಾಡುಗಳನ್ನು ಬಯಲಾಟ ಕಥೆಯಲ್ಲಿ ಮಾಡಿಕೊಂಡಿದ್ದಾನೆ. ಸಾಲಿವೆಂಕಣ್ಣಯ್ಯನವರ ಈ ಬಯಲಾಟ ಕೃತಿಯು ಗದ್ಯ ಪದ್ಯಗಳಿಂದ ಕೂಡಿದೆ. ಚಂಪೂರೂಪವನ್ನೇ ಹೋಲುತ್ತದೆ. ನಮ್ಮ ಅಧ್ಯಯನದಲ್ಲಿ ಏಳು ವೃತ್ತಾಂತಗಳಿಗೆ ಅನುಗುಣವಾಗಿ ಈ ಕೃತಿಯ ಆಕರ ಪರಿಶಿಲನೆ ಮಾಡಬಹುದಾಗಿದೆ.

**ಗಿರಿಜೆಯ ಬಾಲ್ಯ ಮತ್ತು ಯೌವನ ವೃತ್ತಾಂತಗಳು:**

ವೆಂಕಣ್ಣಯ್ಯನವರಲ್ಲಿ ಶಿವನು ಹೇಮಕೂಟದಲ್ಲಿ ತಪಸ್ಸಿಗೆ ಕುಳಿತ ಮೇಲೆ ತಾರಕಾಸುರನ ವೃತ್ತಾಂತ ಪ್ರಾರಂಭವಾಗಿದೆ. ಶ್ರೀಕೃಷ್ಣನ ನೇತೃತ್ವದಲ್ಲಿ ದೇವತೆಗಳು ಸಭೆ ಸೇರಿ ಆನಂತರ ನಾರದರು ಹಿಮವಂತನಲ್ಲಿಗೆ ಬಂದ ಪಾರ್ವತಿಯ ಪೂರ್ವವೃತ್ತಾಂತವನ್ನು ತಿಳಿಸುವಲ್ಲಿ ಪಾರ್ವತಿಯು ಎಂಟು ವರುಷದ ಯೌವ್ವನವತಿಯಾಗಿರುತ್ತಾಳೆ.

ಹರಿಹರನಲ್ಲಿರುವಂತೆಯೇ ವೆಂಕಣ್ಣಯ್ಯರು ಹಿಮವಂತನು ತನ್ನ ಮಗಳಾದ ಪಾರ್ವತಿಗೆ ವರನ ಚಿಂತೆಯಲ್ಲಿ ಇರುವಾಗ ನಾರದರ ಪ್ರವೇಶವಾಗುವಂತೆ ಸಂದರ್ಭವನ್ನು ಅನುಕರಿಸಿದ್ದಾರೆ. ಆದರೆ "ಚೋಳ, ಪಾಂಚಾಳ, ಬಂಗಾಳ, ಮಲಿಯಾಳ, ನೇಪಾಳ, ಪಾಂಡ್ಯ, ಕೈಕೇಯ ಮೊದಲಾದ ದೇಶಂಗಳಂ ಪರಿಪಾಲಿಸುವ ಅರಸರು ಬಂದು ನನ್ನ ಮಗಳಾದ ಗೌರಿಯಂ ವಿವಾಹ ಮಾಡಿಕೊಡುಯಂದು ಅವರಂ ಧಿಕ್ಕಾರ ಮಾಡಿದೆನು" ಎಂದು ಹಿಮವಂತನು ಮುಂದೆ ಪಾರ್ವತಿಗೆ ವರನಾರೆಂಬ ಚಿಂತೆಯಲ್ಲಿದ್ದನೆಂದು ಆಗ ನಾರದರ ಪ್ರವೇಶವಾದಂತೆ ವೆಂಕಣ್ಣಯ್ಯನವರು ಹೇಳಿದರು. ಇದಕ್ಕೆ ಹಿನ್ನೆಲೆಯಾಗಿ ಹರಿಹರನು ಗಿರಿಜಾ ಕಲ್ಯಾಣದ ದ್ವಿತೀಯಾಶ್ವಾಸಾಂತ್ಯದ 106ನೆಯ ಪದ್ಯದಲ್ಲಿ ಮೇಲ್ಕಂಡ ರಾಜರುಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಹರಿಹರನ ಕಾವ್ಯಕ್ಕಿಂತ ಭಿನ್ನವಾಗಿ ಹಿಮವಂತ, ಮೇನಕೆ, ಪಾರ್ವತಿಯರು ವಿವಾಹದ ಚರ್ಚೆಯಲ್ಲಿ ತೊಡಗಿರುವಂತೆ ವೆಂಕಣ್ಣಯ್ಯರು ನಾರದರ ಪ್ರವೇಶದ ಸಂದರ್ಭವನ್ನು ಚಿತ್ರಿಸಿದ್ದಾರೆ. ಹಿಮವಂತ–ಮೇನೆಯರ ಸಂಭಾಷಣೆಯಲ್ಲಿ ಸಾಮಾನ್ಯರ ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುವಂತೆ ಸಂದರ್ಭವನ್ನು ಸೃಜಿಸಲಾಗಿದೆ. ಮೇನಕೆಯು ತನ್ನ ತಮ್ಮನಿಗೆ ಪಾರ್ವತಿಯನ್ನು ವಿವಾಹ ಮಾಡಿಕೊಡಬೇಕೆಂದು ಕೇಳುತ್ತಾಳೆ. ಅದಕ್ಕೆ ಹಿಮವಂತನು "ಛೀ ಹುಚ್ಚಿ ಈಗಾಡಿದ ಮಾತು ಇನ್ನೊಂದು ಸಾರಿ ಆಡಿದರೆ ಥಟ್ಟನೆ ಕಪಾಳಕ್ಕೆ ಹೊಡೆದೇನು ಕಂಡಿಯಾ ಕಾಮಿನಿ!" "ಕಾಡುಗಲ್ಲಿಗೆ ರತ್ನದಂತ ಮಗಳು ಕೊಟ್ಟು ಮನೆಯತನಕ್ಕೆ ಇಟ್ಟುಕೊಳ್ಳೆಂದು ಹೇಳುತ್ತೀಯಲ್ಲಾ! ಈ ಮಾತನ್ನು ಇನ್ನೊಮ್ಮೆ ಆಡಬೇಡ ಕಂಡಿಯಾ ಕಾಮಿನಿ" ಎಂದು ಹಿಮವಂತನು ಸಿಟ್ಟಿನಿಂದ ಮೇನಕೆಯಲ್ಲಿ ನುಡಿಯುತ್ತಾನೆ. ಈ ಸಂದರ್ಭದ ಸಂಭಾಷಣೆಯು ವೆಂಕಟಣ್ಣಯ್ಯರ ಸ್ವಂತಿಕೆಯಾಗಿದೆ. ಹರಿಹರನ ಗಿರಿಜಾ ಕಲ್ಯಾಣದಲ್ಲಿ ಹಿಮವಂತ-ಮೇನೆಯರು ಯೌವ್ವನಕ್ಕೆ ಬಂದ ಪಾರ್ವತಿಯ ಅಂಗಾಂಗ ಸೌಂದರ್ಯವನ್ನು ವರ್ಣಿಸುತ್ತಾ ಪಾರ್ವತಿಗೆ ವರನಾರೆಂದು ಶಿವನೇ ಬಲ್ಲನೆಂದು ಹೇಳುವ ಸಂದರ್ಭದಲ್ಲಿ ನಾರದರು ಅರಮನೆಗೆ ಬರುತ್ತಾರೆ. ವೆಂಕಣ್ಣಯ್ಯರಲ್ಲಿ:

**ಶೀಲೆ ಗೌರಿಗೆ ಪ್ರಾಣಲೋಯರ್ಾರಿರುವರೋ |**
**ನೀಲಕಂಠನೆ ಬಲ್ಲ ಹೇಳುವದಾಯಿತಲ್ಲಾ ಪ್ರಿಯಾ |**

ಎಂದು ಮೇನಕೆಯು ಹಿಮವಂತನಿಗೆ ಹೇಳುತ್ತಾಳೆ. ಆಗ ಹಿಮವಂತನು "ಗೌರಿಗೆ ತಕ್ಕ ವರನನ್ನು ನೋಡಲು ನಾಳಿನ ದಿವಸ ನೀಲಕಂಠ ದೇವರಲ್ಲಿ ಸಮಾರಾಧನೆಯಂ ಮಾಡಿ ನೋಡಿ ಬಾಯಂದು |ಪ್ರಧಾನಿಯಂ ಕಳುಹಿಸುತ್ತೀನಿ" ಎಂದು ಮೇನಕೆಗೆ ಹೇಳುವಾಗ ನಾರದರ ಪ್ರವೇಶವಾಗುತ್ತದೆ. ನಾರದರು ಹಿಮವಂತನಲ್ಲಿಗೆ ಬಂದಾಗ ಹರಿಹರನಲ್ಲಿರುವಂತೆ ವೆಂಕಣ್ಣಯ್ಯರಲ್ಲಿಯೂ ಪಾರ್ವತಿಯ ಪಾದಗಳಿಗೆ ಶರಣು ಎಂದು ನಾರದರು ನಮಸ್ಕರಿಸುತ್ತಾರೆ. ಪಾರ್ವತಿಯನ್ನು ಸ್ತುತಿಸುತ್ತಾರೆ. ಇದರಿಂದ ಅಚ್ಚರಿಗೊಂಡ ಹಿಮವಂತನು ನಾರದರನ್ನು ಪ್ರಶ್ನಿಸುತ್ತಾನೆ. "ಬಾಲಿಯ ಗುಣವೆಲ್ಲ ನೀಲಾಕಂಠನೆಬಲ್ಲ. ಲೋಲಾ ಕುಂತಳಿಗೆ ನೀವು ಕಾಲಿಗೆರಗುವರೆ" ಎಂದು ಹಿಮವಂತನು ನಾರದರಿಗೆ ಹೇಳಿದಾಗ ನಾರದರು ಗಹಗಹಿಸಿ ನಕ್ಕು ಪಾರ್ವತಿಯ ಪೂರ್ವಜನ್ಮ ವೃತ್ತಾಂತ ತಿಳಿಸುತ್ತಾರೆ. ಆಕೆಯನ್ನು ಈ ಕ್ಷಣವೇ ಹೇಮಕೂಟದಲ್ಲಿರುವ ಶಿವನಲ್ಲಿಗೆ ಬಿಟ್ಟು ಬರುವಂತೆ ನಾರದರು ಹೇಳಿ ಹೋಗುತ್ತಾರೆ. ಆಕೆ ಜಗನ್ಮಾತೆಯೆಂದರಿತ ಹಿಮವಂತನು ಆಕೆಯನ್ನು ಹೆಮಕೂಟಕ್ಕೆ ಕಳುಹಿಸುವುದೆಂದು, ಪಾರ್ವತಿಯು ಅರಣ್ಯದಲ್ಲಿ ಹೇಗಿರುವಳೆಂದು ಆಕೆಯನ್ನು ಪ್ರಶ್ನಿಸುತ್ತಾರೆ. ಪಾರ್ವತಿಯು "ನಂದಿ, ಭೃಂಗಿ, ನಾರದಾಖ್ಯ, ಅಖಿಳ ಭಕ್ತರ ವೃಂದವಿರುವುದರಿಂದ ನನ್ನನ್ನು ಕಳುಹಿಸಲು ಚಿಂತಿಸದಿರಿ" ಎಂದು ತಾಯಿ, ತಂದೆಯರಿಗೆ ನುಡಿಯುತ್ತಾಳೆ. ಹರಿಹರನಲ್ಲಿ ಹಿಮವಂತನ ಪುತ್ರೀ ವ್ಯಾಮೋಹವನ್ನು ಕಾಣುತ್ತೇವೆ. ಅಂತೆಯೇ ವೆಂಕಣ್ಣಯ್ಯನವರು ಅದನ್ನು ಸಹಜವಾಗಿ ವಿಸ್ತರಿಸಿದ್ದಾರೆ. ಮೇನಕೆಯ ಪುತ್ರೀ ವ್ಯಾಮೋಹವನ್ನು ಕಾಣುವುದರ ಜೊತೆಗೆ ಹಿಮವಂತನ ಮಗನು ಇಂದ್ರನಿಂದಾಗಿ ಸಮುದ್ರದಲ್ಲಿ ಮುಳುಗಿರುವ ಸಂಗತಿಯನ್ನು ಕವಿ ಹೇಳುತ್ತಾನೆ. ಇದು ಹರಿಹರನಲ್ಲಿಲ್ಲ. ಮಗ ಮತ್ತು ಮಗಳನ್ನು ಕಳೆದುಕೊಂಡು ನಾವಿಬ್ಬರೇ ಹೇಘೆ ಕಾಲಕಳೆಯೋಣ? ಎಂದು ಮೇನಕೆ ಪಾರ್ವತಿಗೆ ಹೇಳುತ್ತಾಳೆ. ನೀನು ಶಿವನನ್ನು ಕೈ ಹಿಡಿದ ಮೇಲೆ ನಮಗೆ ಮುಕ್ತಿ ಮಾರ್ಗ ತೋರಬೇಕೆಂದು ಮೇನಕೆ ಪಾರ್ವತಿಯನ್ನು ಕೇಳುತ್ತಾಳೆ. ಪಾರ್ವತಿಯು "ವಿರೂಪಾಕ್ಷನನ್ನು ದರುಶನ ಮಾಡಿಸುತ್ತೀನಿ" ಎಂದು ತಾಯಿಗೆ ಮಾತು ನೀಡುತ್ತಾಳೆ. ಹೀಗೆ ಹರಿಹರನಿಗಿಂತ ಭಿನ್ನವಾಗಿ ಸಂದರ್ಭವನ್ನು ವಿಸ್ತರಿಸಿದ್ದಾರೆ ವೆಂಕಣ್ಣಯ್ಯರು.

ಮುಂದೆ ಹಿಮವಂತ-ಮೇನಕೆಯರು ಪಾರ್ವತಿಯನ್ನು ಶಿವನಿರುವ ಹೇಮಕೂಟಕ್ಕೆ ಕರೆದೊಯ್ದು ಬಿಟ್ಟು ಬರುವ ಸಂಗತಿ ವೆಂಕಣ್ಣಯ್ಯರಲ್ಲಿದೆ. ಹೇಮಕೂಟ ಪ್ರಾಂತ್ಯಕ್ಕೆ ಹೋದಾಗ ಹಿಮವಂತನಿಗೆ ನಂದಿಯ ದರ್ಶನವಾಗುವುದು ಹರಿಹರನಲ್ಲಿದೆ(ಗಿರಿ.ಕ.5.26.27). ಅಲ್ಲಿ ನಂದಿಯು ಪಾರ್ವತಿಯನ್ನು ಕಂಡು ನಮಸ್ಕರಿಸುತ್ತಾನೆ. ವೆಂಕಣ್ಣಯ್ಯರಲ್ಲಿಯೂ ಹಿಮವಂತನು ನಂದಿಯ ಹತ್ತಿರ ಬಂದು ಪಾರ್ವತಿಯ ಪೂರ್ವಜನ್ಮ ಸಂಗತಿ ತಿಳಿಸಿದಾಗ ನಂದಿಯು "ಅಪ್ಪ ಹಿಮವಂತ ನೀನೆ ಪುಣ್ಯವಂತ | ಇಂದಿಗೆ ಜನನಿಯಂ ಕಾಣಿಸಿದಿ ಅಮ್ಮಾ ಶಾಂಭವಿ ನಮೋನ್ನಮಃ" ಎಂದು ನಮಸ್ಕರಿಸಿ ಶಿವನು ಆಕೆಗೋಸ್ಕರವಾಗಿಯೇ ತಪಸ್ಸು ಮಾಡುತ್ತಿರುವನೆಂಬುದನ್ನು ಹೇಳುತ್ತಾನೆ. ಮುಂದೆ ಹಿಮವಂತನು ಪಾರ್ವತಿಯ ಅಪ್ಪಣೆ ಕೇಳಿ "ಗಂಡನಂ ವರಿಸಿ ಸಂತೋಷಾಸ್ಪದೆಯಾಗಿರು, ನಮ್ಮನ್ನು ಮಾತ್ರ ಮರಿಯಬೇಡ ಕಂಡಿಯಾ ಮಗಳೆ" ಎಂದು ಪಾರ್ವತಿಯನ್ನು ಬೀಳ್ಕೊಂಡು ಬರುತ್ತಾನೆ.

**ತಾರಕಾಸುರ ಮತ್ತು ದೇವತೆಗಳ ಯುದ್ಧ ವೃತ್ತಾಂತ:**

ವೆಂಕಣ್ಣಯ್ಯರಲ್ಲಿ ಪಾರ್ವತಿಯ ಜನನ ಪೂರ್ವ ವೃತ್ತಾಂತದ ವಿವರಗಳು ಮಹೇಶ್ವರ ಸಭೆ ಎಂಬ ಮೊದಲ ಸಭಾದಲ್ಲಿ ಕಂಡುಬರುತ್ತದೆ. ಮಹೇಶ್ವರನ ಸಭೆಯ ನಂತರ ತಾರಕಾಸುರನ ಸಭೆ ಕಂಡುಬರುತ್ತದೆ. ಹರಿಹರನ ಗಿರಿಜಾ ಕಲ್ಯಾಣದಲ್ಲಿ ಪಾರ್ವತಿಯ ಯೌವ್ವನ ವೃತ್ತಾಂತವಾದ ಮೇಲೆ ಆರನೆಯ ಆಶ್ವಾಸದಲ್ಲಿ ತಾರಕಾಸುರ ಮತ್ತು ದೇವತೆಗಳ ನಡುವೆ ನಡೆದ ಯುದ್ಧದ ವಿವರಗಳನ್ನು ಹೇಳಿದೆ. ವೆಂಕಣ್ಣಯ್ಯರಲ್ಲಿ ತಾರಕಾಸುರನ ಸಭೆ ಎಂಬ ಮೂರನೆಯ ಅಧ್ಯಾಯದಲ್ಲಿ ತಾರಕಾಸುರ, ವಜ್ರದೌಂಷ್ಟ್ರ, ಕಂಠೀರವ-ಈ ಮೂವರು ಅಸುರರು ದೇವತೆಗಳ ಮೇಲೆ ಮಾಡುವ ಉಪಟಳ, ಯುದ್ಧದ ವಿವರಗಳು ಕಂಡುಬರುತ್ತವೆ. ಆದರೆ ಹರಿಹರನಲ್ಲಿರುವಂತೆ ಈ ಭಾಗದಲ್ಲಿ ತಾರಕಾಸುರನು ದೇವತೆಗಳ ಮೇಲೆ ನಡೆಸಿದ ಯುದ್ಧದ ವಿವರದ ವರ್ಣನೆಗಳಿಲ್ಲ. ಹರಿಹರನು ತಾರಕಾಸುರನ ಪರಿಚಯದೊಂದಿಗೆ, ಆತನು ದೇವತೆಗಳಿಗೆ ನೀಡುತ್ತಿದ್ದ ಉಪಟಳವನ್ನು ವರ್ಣಿಸಿದ್ದಾನೆ (ಗಿರಿ.ಕ 6-2,3.4) ವೆಂಕಣ್ಣಯ್ಯರೂ ಕೂಡ "ಚಂದ್ರಸೂರ್ಯರ ಮಾರ್ಗಮಂಕಟ್ಟಿ ಋಷ್ಯಾದಿಗಳ ತಪೋಭಂಗಮಂ ಮಾಡಿ ಯಜ್ಞಂಗಳ ಕೆಡಿಸೀ ಗೋಮಾಂಸಮಂ ಬ್ರಹ್ಮಚಾರಿಗಳ ವಕ್ತದಲ್ಲಿಡಿಸಿ, ಅನೇಕ ವನಿತರತ್ನಂಗಳ ಸಂಹರಿಸಿ ಸ್ವೇಚ್ಚೆಯಿಂದ ಭಕ್ಷಣೆಯಂ ಮಾಡಿ, ಶೀಶುಗಳ ಹತಮಾಡಿ ಅಲೆಲೆಲೆ ದಿಗ್‌ದೇವತೆಗಳ ಹಿಡಿದುಕಟ್ಟಿ ಬ್ರಂಹ್ಮರುದ್ರಯಿಂದ್ರಾದಿಗಳಂ ಹಿಡಿದು ತರುವ ಕಾರಣ ಬರೊಲಾವಾಯಿತು" ಎಂದು ತಾರಕನ ಪಾತ್ರವನ್ನು ಪರಿಚಯಿಸಿ ಆತನು ದೇವತೆಗಳಿಗೆ ನೀಡುತ್ತಿದ್ದ ಉಪಟಳವನ್ನು ಉಲ್ಲೇಖಿಸಿದ್ದಾರೆ.

ಹರಿಹರನು ತಾರಕನನ್ನು ಪ್ರತಿನಾಯಕನಂತೆ ಚಿತ್ರಿಸಿ ಶಿವನನ್ನು ಹೊರತುಪಡಿಸಿ ದೇವಾದಿದೇವತೆಗಳನ್ನೆಲ್ಲ ಸೋಲಿಸುವ ಸಾಮರ್ಥ್ಯವುಳ್ಳವನಂತೆ ಚಿತ್ರಿಸಿದ್ದಾನೆ. ವೆಂಕಣ್ಣಯ್ಯರಲ್ಲಿ ತಾರಕನು ಶಿವನನ್ನು ಕೂಡ ವಿರೋಧಿಸುವ ಸಾಮರ್ಥ್ಯವುಳ್ಳವನಾಗಿದ್ದಾನೆ. ಹರಿಹರನಲ್ಲಿ ತಾರಕನೊಡನೆ ಬೃಹಸ್ಪತಿಯು ಸಂಧಾನ, ಅದರ ವಿಫಲತೆ, ತಾರಕನು ದೇವಾಧಿದೇವತೆಗಳಾದ ಇಂದ್ರ, ಅಗ್ನಿ, ವಾಯು, ವರುಣ, ಯಮ, ವಿಷ್ಣು, ಬ್ರಹ್ಮರೊಡನೆ ಯುದ್ಧ ಮಾಡುವ ವಿವರಗಳನ್ನು ವರ್ಣನಾತ್ಮಕವಾಗಿ ಚಿತ್ರಿಸಲಾಗಿದೆ. ವೆಂಕಣ್ಣಯ್ಯರಲ್ಲಿ ಯುದ್ಧದ ವರ್ಣನೆಗಳಿಲ್ಲ. ವೆಂಕಣ್ಣಯ್ಯರಲ್ಲಿ ಇಂದ್ರ ಮತ್ತು ಶಚಿಯರನ್ನು ತಾರಕಾಸುರನು ಸೆರೆಹಿಡಿದು ಪೀಡಿಸುವ, ಉಪಟಳ ನೀಡುವ ಸಂಗತಿ ವಿವರವಾಗಿದೆ. ಅದರಲ್ಲೂ ತಾರಕನು ಇಂದ್ರನ ಲೋಕಕ್ಕೆ ದಾಳಿಯಿಟ್ಟು, ಸೂರೆಮಾಡಿ ಶಚಿಯನ್ನು ಸೆರೆಹಿಡಿದು ತನ್ನ ಅರಮನೆಗೆ ಬರುವಂತೆ ಗೋಳಾಡಿಸುತ್ತಾನೆ. ಇಂದ್ರ ಮತ್ತು ಶಚಿಯರ ಸಂಭಾಷಣೆಗಳಲ್ಲಿ ತಾರಕನ ಜೊತೆ ಯುದ್ಧವಾಗುವ ಸಂಗತಿ ಕಾಣುತ್ತದೆ. ಇಂದ್ರನು ಸೋತು ಓಡಿ ಹೋದಾಗ ತಾರಕನು ಶಚಿಯನ್ನು ಸೆರೆಹಿಡಿದು ಹಿಂಸಿಸುತ್ತಾನೆ. ಶಚಿಯ ಮಾತುಗಳಲ್ಲಿ ಶಿವನನ್ನು ಪ್ರಾರ್ಥಿಸುವುದನ್ನು ಕಾಣುತ್ತೇವೆ. ತಾರಕನು "ನಡಿ ನಡಿ ಇಂದ್ರನ ಮಡದಿಯೆ| ಮತ್ತುರದಡಿಗಡಿ ಇಡುಕಾಂತೆ|ಚಿಂತೆ|ಬಿಡು ನಿನ್ನಗಂಡನೆ ಒಡೆಯನೆಂದು ಎಮ್ಮಡಿಯೊಳಿರು ಬಾರೇ ನೀರೇ" (ಗಿರಿ.ಕ.ಯ-ಪುಟ. 15). ತಾರಕನು ಶಚಿಯನ್ನು ಗೋಳಾಡಿಸುವ ವಿವರಗಳು ದೀರ್ಘವಾಗಿವೆ. ತಾರಕನು ಶಚಿಗೆ ನೀಡುವ ಉಪಟಳದ ವಿವರ ಹರಿಹರನಲ್ಲಿಲ್ಲದ ವೆಂಕಣ್ಣಯ್ಯರ ಸ್ವಂತಿಕೆಯಾಗಿದೆ. ಶಚಿ-ತಾರಕರ ಸಂಭಾಷಣೆಗಳು ದೀರ್ಘವಾಗಿ

ಕಂಡುಬರುತ್ತವೆ. ಅವುಗಳಲ್ಲಿ ಅನೇಕ ಪುರಾಣ ಸಂಗತಿಗಳನ್ನು ಉಲ್ಲೇಖಿಸಲಾಗಿದೆ.

ವೆಂಕಣ್ಣಯ್ಯರಲ್ಲಿ ಮಹೇಶ್ವರ ಸಭೆ, ತಾರಕಾಸುರ ಸಭೆಗಳಾದ ಮೇಲೆ ಶ್ರೀಕೃಷ್ಣಸಭೆ ಎಂಬುದು ಮೂರನೆಯ ಅಧ್ಯಾಯವಾಗಿದೆ. ಹರಿಹರನ ಗಿರಿಜಾ ಕಲ್ಯಾಣದಲ್ಲಿ ತಾರಕಾಸುರನ ಉಪಟಳದಿಂದ ನೊಂದ ದೇವತೆಗಳು ವಿಷ್ಣುವಿನ ನೇತೃತ್ವದಲ್ಲಿ ಸಭೆ ಸೇರಿ ಮದನನನ್ನು ಕರೆಸಿ ಶಿವತಪೋಭಂಗಗೊಳಿಸುವುದನ್ನು ಕಾಣಬಹುದಾಗಿದೆ. ಈ ಸಂಗತಿಯನ್ನು ವೆಂಕಣ್ಣಯ್ಯರು ಶ್ರೀ ಕೃಷ್ಣ ಸಭೆಯಾಗಿ ವಿಸ್ತರಿಸಿಕೊಂಡಿದ್ದಾರೆ. ವೆಂಕಣ್ಣಯ್ಯರಲ್ಲಿ ವಿಷ್ಣುವಿನ ಬದಲಾಗಿ ಕೃಷ್ಣನ ಪಾತ್ರ ಕಾಣುತ್ತದೆ. ಬೃಹಸ್ಪತಿಯು ತಾರಕನ ಉಪಟಳದಿಂದ "ಸಂಕಟಕ್ಕಾಗಿ ಬ್ರಹ್ಮನಲ್ಲಿಗೆ ಹೋದರೆ ರಾಕ್ಷಸಾಂತಕನೆಂಬ ಬಿರುದು ಯಾರಿಗಿರುವುದೋ ಅವರಲ್ಲಿಗೆ ಹೋಗೆಂದನು" ಎಂದು, "ನೀಲಕಂಠಗೆ ಸುದ್ಧಿ ಹೇಳೇನೆಂದರೆ ಯಿಲ್ಲ| ಗೋಳಾಟವನು ದಾರಿಗೇಳಲಿ - ನಾನು" ಎಂದು ಕೃಷ್ಣನಲ್ಲಿಗೆ ಬಂದು ದೇವತೆಗಳ ಅಸಹಾಯಕತೆಯನ್ನು ತಿಳಿಸುತ್ತಾನೆ. ಬೃಹಸ್ಪತಿಯು ಹಿಂದಿರುಗಿ ಬರುವಾಗ ನಾರದರು ಭೇಟಿಯಾಗಿ ಅನೇಕ ಹಾಸ್ಯ ಸಂಗತಿಗಳ ಪ್ರಸ್ತಾಪವಾಗುತ್ತದೆ. ನಾರದರು ಬೃಹಸ್ಪತಿಗೆ ತಪಸ್ಸಿನಲ್ಲಿರುವ ಶಿವನು ಪಾರ್ವತಿಯನ್ನು ಸೇರಿ ಷಣ್ಮುಖನು ಹುಟ್ಟುವಂತೆ ಮಾಡಬೇಕಾದರೆ ದೇವತೆಗಳೆಲ್ಲ ವಿಷ್ಣುವಿನಲ್ಲಿಗೆ ಹೋಗಿ ಶಿವನ ತಪೋಭಂಗ ಮಾಡುವುದಕ್ಕಾಗಿ ಮನ್ಮಥನನ್ನು ಕಳುಹಿಸುವಂತೆ ಕೇಳಬೇಕೆಂದು ತಿಳಿಸುತ್ತಾರೆ.

ಒಟ್ಟಾರೆ ವೆಂಕಣ್ಣಯ್ಯರು ಕಥೆಯಲ್ಲಿ ಹರಿಹರನ ಗಿರಿಜಾ ಕಲ್ಯಾಣವನ್ನು ಅನುಸರಿಸಿದ್ದರೂ ಹರಿಹರನ ಪದ್ಯಗಳನ್ನಾಗಲೀ, ಸಂಭಾಷಣೆಯನ್ನಾಗಲೀ ಅನುಕರಿಸಿಲ್ಲ. ಸನ್ನಿವೇಶ, ಸಂದರ್ಭ ಮತ್ತು ಪಾತ್ರ ಚಿತ್ರಣಗಳಲ್ಲಿ ವೆಂಕಣ್ಣಯ್ಯರು ಹರಿಹರನಿಗಿಂತ ಭಿನ್ನವಾಗಿ ನಿರೂಪಿಸಿದ್ದಾರೆ. ಪಾರ್ವತಿಯು ಜನಿಸಿ, ಶಿವನನ್ನು ವಿವಾಹವಾಗಿ ಷಣ್ಮುಖನು ಹುಟ್ಟಿ ತಾರಕಾಸುರರನ್ನು ಕೊಲ್ಲುವವರೆಗೂ ಕವಿ ಗಿರಿಜಾ ಕಲ್ಯಾಣವೆಂದೇ ಹೇಳಿದ್ದಾನೆ. ಶಿವ, ಪಾರ್ವತಿಯರ ಸೌಂದರ್ಯ ವರ್ಣನೆಯಾಗಲೀ, ವಿವಾಹ ವರ್ಣನೆಗಳಾಗಲೀ ಕಾಣುವುದಿಲ್ಲ. ಬದಲಿಗೆ ಇದು ಶ್ರೀಕೃಷ್ಣ-ರುಕ್ಮಿಣಿ-ಮನ್ಮಥ-ರತಿಯರ ಕೌಟುಂಬಿಕ ಕಥೆಯಾಗಿದೆ. ಶಿವನು ಮದನನನ್ನು ಸುಟ್ಟಮೇಲೆ ಮತ್ತೆ ಬದುಕಿಸುವ ವಿವರವಿಲ್ಲ. ಈ ಪುರಾಣಕಾವ್ಯಗಳು, ಕಾಳಿದಾಸ, ಹರಿಹರ ಇತ್ಯಾದಿ ಹಿಂದಿನೆಲ್ಲ ಕಾವ್ಯಗಳಲ್ಲಿ ವಿಷ್ಣುವಿನ ಪುತ್ರ ಮನ್ಮಥನು ಶಿವನ ಉರಿಗಣ್ಣಿನಿಂದ ಭಸ್ಮವಾಗಿ ಮತ್ತೆ ರತಿಯ ಶೋಕದಿಂದ ಮರುಗಿ ಮನ್ಮಥನು ಅನಂಗನಾಗಿರುವಂತೆ ಶಿವನು ಮನ್ಮಥನಿಗೆ ವರ ದಯಪಾಲಿಸುತ್ತಾನೆ. ಹಾಗೆಯೇ ಮನ್ಮಥನು ಮುಂದೆ ಶ್ರೀಕೃಷ್ಣ-ರುಕ್ಮಿಣಿಯರ ಮಗನಾಗಿ ಪ್ರದ್ಯುಮ್ನನ ಹೆಸರಿನಲ್ಲಿ ಜನಿಸುತ್ತಾನೆ. ಆದರೆ ವೆಂಕಣ್ಣಯ್ಯರ ಈ ಕಾವ್ಯದಲ್ಲಿ ಈ ಹಿಂದಿನ ಯಾವ ಕಾವ್ಯದಲ್ಲೂ ಕಾಣದಂತೆ ಮನ್ಮಥನು ಕೃಷ್ಣ-ರುಕ್ಮಿಣಿಯರ ಪುತ್ರನಾಗಿಯೇ ಕಂಡುಬಂದು, ಶಿವತಪೋಭಂಗಕ್ಕೆ ಹೋಗಿ ಶಿವನಿಂದ ಸುಟ್ಟುಹೋದಂತೆ ಕಥೆಯಿದೆ. ಕಥೆಯು ದ್ವಾಪರಯುಗದಲ್ಲಿ ನಡೆದಂತೆ ವೆಂಕಣ್ಣಯ್ಯರು ಮಾರ್ಪಡಿಸಿದ್ದಾರೆ.

## ಕೊನೆ ಟಿಪ್ಪಣಿಗಳು:

1. ದುರ್ಗಾದಾಸ್ ಕೆ. ಆರ್. & ನಾಗರಾಳ ಎಚ್. ಎಸ್. (ಸಂ.). (1995). ಸಾಲಿ ವೆಂಕಣ್ಣಯ್ಯ ಕೃತ ಗಿರಿಜಾ ಕಲ್ಯಾಣ ಬಯಲಾಟ. ಬೆಳಗಾವಿ. ಪು.ಸಂ. 16
2. ಅದೇ.
3. ಅದೇ.

## ಪರಾಮರ್ಶನ ಗ್ರಂಥಗಳು:

1. ದುರ್ಗಾದಾಸ್ ಕೆ. ಆರ್. & ನಾಗರಾಳ ಎಚ್. ಎಸ್. (ಸಂ.). (1995). ಸಾಲಿ ವೆಂಕಣ್ಣಯ್ಯ ಕೃತ ಗಿರಿಜಾ ಕಲ್ಯಾಣ ಬಯಲಾಟ. ಬೆಳಗಾವಿ.
2. ಹರಿಹರ. ನಂಜುಂಡಾರಾಧ್ಯ ಎಂ. ಜಿ. (ಗದ್ಯಾನುವಾದ). (2004). ಗಿರಿಜಾಕಲ್ಯಾಣ ಮಹಾಪ್ರಬಂಧ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
3. ಪಂಡಿತ ವೆಂಕಟರಾವ್. (1945). ಶಿವಮಹಾಪುರಾಣ: ಭಾಗ-4 ರುದ್ರಸಂಹಿತಾ ಪಾರ್ವತೀಖಂಡ. ಜಯಚಾಮರಾಜೇಂದ್ರ ಗ್ರಂಥಮಾಲ. ಮೈಸೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.